★ ಸಸಿತೋಟ



ಹಾಂಗ್‌ಕಾಂಗ್‌ನಲ್ಲಿ ವಸತಿ ಸಮಸ್ಯೆ ತೀರಾ ಹೆಚ್ಚಿದೆಯಂತೆ. ಹೀಗಾಗಿ 120 ಚ.ಅಡಿಯ ದೊಡ್ಡ ನೀರಿನ ಕೊಳವೆಯಲ್ಲಿ ಮೈಕ್ರೊ ವಸತಿ ಹೆಸರಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತಿದೆಯಂತೆ. ಅಲ್ಲಿ ಖ್ಯಾತ ವಾಸ್ತು ಶಿಲ್ಪಿಗಳು ಸಾವಿರಾರು ಡಾಲರ್ ವೆಚ್ಚ ಮಾಡಿ ಈ ಮನೆಗಳನ್ನು ನಿರ್ಮಿಸಿ ಬೆನ್ನು ತಟ್ಟಿಕೊಂಡರೆ, ಮುಂಬೈ, ಬೆಂಗಳೂರಿನಲ್ಲಿ ಬಿಡಿಗಾಸು ಖರ್ಚಿಲ್ಲದೇ ಸಾವಿರಾರು ಇಂತಹ ಮೈಕ್ರೊ ಮನೆಗಳಿರುವ ಸುದ್ದಿ ದೂರದ ಹಾಂಗ್‌ಕಾಂಗ್‌ವರೆಗೆ ಹೇಗೆ ತಲುಪಬೇಕು!

ಜರ್ಮನಿಯ ಡ್ಯಾಮ್‌ಸ್ಟ್ರಟ್‌ನಲ್ಲಿ ಯುವಕನೊಬ್ಬ ಕುಡಿದ ಮತ್ತಿನಲ್ಲಿ ಇನ್ನೊಬ್ಬ ವ್ಯಕ್ತಿಯೊಡನೆ ಜಗಳ ತೆಗೆದ. ಜಗಳ ಪೊಲೀಸ್ ಠಾಣೆಯವರೆಗೆ ಹೋಯಿತು. ಅಲ್ಲಿ ಪೊಲೀಸರು ಅನುಮಾನಗೊಂಡು ಯುವಕನ ದೈಹಿಕ ವಿಚಾರಣೆಗೆ ತೊಡಗಿದಾಗ ಆ ಯುವಕ ಪ್ಯಾಂಟಿನೊಳಗಿಂದ ಒಂದೊಂದೇ ಹೆಬ್ಬಾವಿನ ಮರಿಗಳನ್ನು ತೆಗೆಯತೊಡಗಿದನಂತೆ. ಪೊಲೀಸರು ಸದ್ಯ ಯುವಕನನ್ನೂ, ಹಾವಿನ ಮರಿಗಳನ್ನೂ ಜೈಲಿನ ಬೇರೆ ಬೇರೆ ಕೊಠಡಿಗಳಲ್ಲಿಟ್ಟು ಆರೈಕೆ ಮಾಡುತ್ತಿದ್ದಾರಂತೆ. ಒಂದೇ ಏಟಿಗೆ ಎರಡು ಕೇಸುಗಳು ಎಂದು ಪೊಲೀಸರಿಗೆ ಲಾಭವಾಗಿದ್ದೇ ಬಂತು.



ಲಂಡನ್ನಿನ ಕಾಫಿಷಾಪ್ ರೂಪಿಸಿದ ಸೆಲ್ಫಿಸಿನೊ. 7.5 ಡಾಲರ್ ತೆತ್ತು ನಿಮ್ಮ ಫೋಟೋವನ್ನು ಕಾಫಿ ತಯಾರಿಸುವ ಸಿನೊ ಯಂತ್ರಕ್ಕೆ ಅಪ್‌ಲೋಡ್ ಮಾಡಿ ಕಪ್‌ನ ನೊರೆಯ ಮೇಲೆ ಫುಡ್‌ಕಲರ್‌ನಲ್ಲಿ ನಿಮ್ಮ ಚಿತ್ರ ಮೂಡಿಸುತ್ತಾರಂತೆ. ಕಾಫಿ ಕುಡಿಯುತ್ತ ಸೆಲ್ಫಿ ತೆಗೆದುಕೊಳ್ಳಬಹುದು, ಆ ಕೂಡಲೇ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಬಹುದು. ಫೋಟೊ ಬೇಕು ಯಂತ್ರಕ್ಕೆ ಹಾಕಲು, ಸೆಲ್ಫಿ ತೆಗೆ, ಪೋಸ್ಟ್ ಮಾಡು ಎಂದೆಲ್ಲ ಸ್ಮಾರ್ಟ್‌ಫೋನ್ ಆದೇಶ ನೀಡಿ ರಗಳೆ ಮಾಡಿದರೆ ರಸಸ್ವಾದ ಮಾಡುವುದು ಯಾವಾಗಲೋ!



ಬೀದರ್‌ನ ಈ ಎರಡು ವರ್ಷದ ಪುಟ್ಟ ಪೋರ ಸಮರ್ಥ್ ಬಂಗಾರಿಯೆಂದರೆ ಕೋತಿಗಳಿಗೆ ಅದೇನು ಪ್ರೀತಿಯೋ! ತೊದಲು ನುಡಿಯ ಈ ಬಾಲಕನ ಸ್ನೇಹ ಗಳಿಸಿ ಕೈ ತುತ್ತು ತಿನ್ನುತ್ತವಂತೆ. ಕೋತಿಯಾಟ ಆಡುವ ಬದಲು ಮನುಷ್ಯನಾಟ ಕಲಿಯಲು ಯತ್ನಿಸುತ್ತಿರಬಹುದು.

ಅಮೆರಿಕದ ಮಿಸ್ಸೋರಿಯಲ್ಲಿ ನಯ್‌ಝಿಯಾ ಎಂಬ ವಿದ್ಯಾರ್ಥಿನಿ ಹೆರಿಗೆ ನೋವು ತಿನ್ನುತ್ತಲೇ ಆಸ್ಪತ್ರೆಯ ಹಾಸಿಗೆ ಮೇಲೆ ಕುಳಿತು ಅಂತಿಮ ಪರೀಕ್ಷೆ ಬರೆದಳಂತೆ. ಮನಃಶಾಸ್ತ್ರದ ಕುರಿತ ಪ್ರಶ್ನೆಪತ್ರಿಕೆ ಸುಲಭವಿತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಮಗ ಜನಿಸುವ 12 ತಾಸು ಮೊದಲು ಪರೀಕ್ಷೆ ಬರೆದಿದ್ದರಿಂದ ಮುಂದಿನ ದಿನಗಳು ಆರಾಮದಾಯಕ ಎಂದು ಹದಿಹರೆಯದಲ್ಲೇ ತಾಯಿಯಾದ ಆಕೆ ಟ್ವೀಟ್ ಮಾಡಿದ್ದಾಳಂತೆ. ತ್ರಾಸದಾಯಕವಾಗಿದ್ದು ಪರೀಕ್ಷೆಯೋ, ಹೆರಿಗೆಯೋ ಎಂಬುದನ್ನು ಆಕೆ ತಿಳಿಸಿಲ್ಲವಂತೆ.



ಈ ಹುಲಿ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಗಡಿಯಲ್ಲಿರುವ ಹಳ್ಳಿಯೊಂದರಲ್ಲಿ ನಡೆದ ಮದುವೆಗೆ ಭೇಟಿ ನೀಡಿತ್ತಂತೆ. ಅತಿಥಿಗಳು ತಿಂದು, ಕುಡಿದು, ಕುಣಿದು ಕುಪ್ಪಳಿಸುತ್ತಿದ್ದಾಗ ಆಹ್ವಾನವಿಲ್ಲದ ಕಾಡಿನ ಈ ಅತಿಥಿ ಆಗಮಿಸಿದ್ದೇ ತಡ, ಹಾಡು, ಕುಣಿತವೆಲ್ಲ ಏಕ್‌ದಂ ಬಂದ್. ಈ ವಿಐಪಿಗೆ ಗೌರವ ಕೊಟ್ಟು ಎಲ್ಲರೂ ಮನೆಯ ಹಿಂದಿನ ಹುಲಿಯ ತವರಿಗೆ ಓಡಿದ್ದರಂತೆ.